**ಓ.ಎಸ್. ನಂ. 97/2021**
**ಪಿ. ಡಬ್ಲ್ಯೂ ಃ 1**

**ದಿಃ 25.10.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲು ಃ ಪ್ರತಿವಾದಿ ಪರ ಶ್ರೀ ಪಿ. ಎಸ್. ವಕೀಲರಿಂದ ಃ**

ನಾನು ಹಾಜರು ಪಡಿಸಿದ ವಂಶ ವೃಕ್ಷದಲ್ಲಿ ಹನುಮಯ್ಯನ ಎಲ್ಲಾ ವಾರಸುದಾರರನ್ನು ಸೇರಿಸಿದ್ದೇನೆ. 2 ನೇ ಪ್ರತಿವಾದಿಯು ನಮ್ಮ ಕುಟುಂಬಕ್ಕೆ ಸೇರಿದವರಲ್ಲ. ದಿನಾಂಕಃ 18.06.2022 ರಂದು 7 ನೇ ಪ್ರತಿವಾದಿಗೆ ಬರೆದುಕೊಟ್ಟಿದ್ದ ಕರಾರು ಪತ್ರ ರದ್ದಾಗಿತ್ತು ಎಂದರೆ ಸರಿ. ಆ ವಿಷಯ ಗೊತ್ತಾದ ನಂತರ 7 ನೇ ಪ್ರತಿವಾದಿಯನ್ನು ಕೇಸಿನಿಂದ ಕೈ ಬಿಡಲು ನಾನು ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಪ್ರತಿವಾದಿ ರಾಮ, ಲಕ್ಷ್ಮಣ ರವರ ಖಾತಾ ವೆಂಕಟರಮಣಯ್ಯ ಎಂದರೆ ಸರಿ. ಅವರು ಬದುಕಿದ್ದಾಗ ಅರೆ ಪಾಳ್ಯ, ಕನ್ನಸಂದ್ರ ಗ್ರಾಮ ಕುದೂರು ಹೋಬಳಿ ಯಲ್ಲಿ ವಾಸ ಆಗಿದ್ದಾರೆ ಎಂದರೆ ಸರಿ. ದಾವಾ ಐಟಂ ನಂ. 1 ರಲ್ಲಿ 16 1/2 ಗುಂಟೆ, ಐಟಂ ನಂ. 2 ರಲ್ಲಿ 9 ಗುಂಟೆ, ಐಟಂ ನಂ. 3 ರಲ್ಲಿ 11 ಗುಂಟೆ, ಐಟಂ ನಂ. 4 ರಲ್ಲಿ 2 1/2 ಗುಂಟೆ ಇವುಗಳು ವೆಂಕಟರಮಣಯ್ಯ ಇವರ ಸ್ವಂತದ ಸ್ವತ್ತುಗಳು ಎಂದರೆ ಸರಿಯಲ್ಲ. ಒಟ್ಟು ಕುಟುಂಬದ ಸ್ವತ್ತು ಎಂದು ಹೇಳುತ್ತಾರೆ. ವೆಂಕಟರಮಣಯ್ಯ ಮತ್ತು ಅವರ ಹೆಂಡತಿ ಗಂಗ ಮುತ್ತಮ್ಮ ಇವರಿಗೆ ಗಂಡು ಮಕ್ಕಳು ಇರಲಿಲ್ಲ ಎಂದರೆ ಸರಿ . ದಿನಾಂಕಃ 30.10. 1973 ರಂದು ವೆಂಕಟರಮಣಯ್ಯ ಇವರು ಪ್ರತಿವಾದಿ ರಾಮ, ಲಕ್ಷ್ಮಣ ರವರಿಗೆ ಒಂದು ನೋಂದಾಯಿತ ವಿಲ್ ಮೂಲಕ ಆಸ್ತಿ ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ರಾಮ, ಲಕ್ಷ್ಮಣ ಇವರು ವೆಂಕಟರಮಣಯ್ಯ ಇವರ ಅಣ್ಣನ ಮಕ್ಕಳು ಎಂದರೆ ಸರಿ . ವೆಂಕಟರಮಣಯ್ಯ ಇವರು ದಿನಾಂಕಃ 10.12.1985 ರಂದು ತೀರಿಕೊಂಡಿದ್ದಾರೆ ಎಂದರೆ ಗೊತ್ತಿಲ್ಲ. ಏಕೆಂದರೆ ಆಗ ನಾನು ಚಿಕ್ಕವಳಿದ್ದೆನು. ವೆಂಕಟರಮಣಯ್ಯ ಇವರ ಕಾಲವಾದ ನಂತರ ರಾಮ , ಲಕ್ಷ್ಮಣ ಇವರು ಐಟಂ ನಂ. 2 ರಿಂದ 4 ಇವುಗಳನ್ನು ಎಂ. ಆರ್. 25/98-99 ರ ಪ್ರಕಾರ ತಮ್ಮ ಹೆಸರಿನಲ್ಲಿ ಖಾತೆ ಮಾಡಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಐಟಂ ನಂ. 1 ನ್ನು ಎಂ. ಆರ್. 32/2004-05 ರ ಪ್ರಕಾರ ಖಾತೆ ಮಾಡಿಸಿಕೊಂಡು ಅನುಭವಿಸುತ್ತಿದ್ದಾರೆ ಎಂದರೆ ಸರಿಯಲ್ಲ. ವೆಂಕಟರಮಣಯ್ಯ ಇವರು ಯಾವುದೇ ವಿಲ್ ಮಾಡಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಎಂ. ಆರ್. 32/2004-05 ರ ಪ್ರಕಾರ ರಾಮ, ಲಕ್ಷಣ ಇವರಿಗೆ ಖಾತೆ ಆಗಿದೆ ಎಂದು ದಾಖಲೆ ತೋರಿಸಿದಾಗ ಸಾಕ್ಷಿ ಒಪ್ಪಿಕೊಂಡಿಲ್ಲ. ಉಳಿದ ಆಸ್ತಿಗಳನ್ನು ಅದೇ ರೀತಿ ಖಾತೆ ಮಾಡಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.



ವೆಂಕಟರಮಣಯ್ಯ ಇವರಿಗೆ ಗಂಗಮ್ಮ ಮತ್ತು ವೆಂಕಟಮ್ಮ ಎನ್ನುವ ಮಕ್ಕಳಿದ್ದರು ಎಂದರೆ ಸರಿ. ಅವರ ಮದುವೆ ಆಗಿತ್ತು ಎಂದರೆ ಸರಿ. ಗಂಗಮ್ಮ ಇವರಿಗೆ ರಂಗಸ್ವಾಮಯ್ಯ, ಚಲುವಯ್ಯ, ಗೋವಿಂದಪ್ಪ ಎನ್ನುವ ಮಕ್ಕಳಿದ್ದರು ಎಂದರೆ ಸರಿ. ವೆಂಕಟಮ್ಮ ಇವರಿಗೆ ಲಕ್ಷ್ಮಮ್ಮ ಎನ್ನುವ ಮಗಳಿದ್ದರು ಎಂದರೆ ಸರಿ. ಗಂಗಮ್ಮ

ಮತ್ತು ವೆಂಕಟಮ್ಮ ಇವರ ಮಕ್ಕಳು ಇದೇ ನ್ಯಾಯಾಲಯದಲ್ಲಿ ಓ ಎಸ್ 852/2014 ಎನ್ನುವ ದಾವೆಯನ್ನು ರಾಮ, ಲಕ್ಷ್ಮಣ ಹಾಗೂ ಇತರರ ಮೇಲೆ ಹಾಕಿದ್ದರು ಎಂದರೆ ಸರಿ. ಅದನ್ನು ವಾಪಸ್ ಪಡೆದಿದ್ದಾರೆ ಎಂದು ಸಾಕ್ಷಿ ಹೇಳುತ್ತಾರೆ. ಆ ದಾವೆಯಲ್ಲಿ ಅವರು ವಿಲ್ ನಮ್ಮ ಮೇಲೆ ಅನ್ವಯಿಸುವುದಿಲ್ಲ ಎಂದು ಪರಿಹಾರ ಕೇಳಿದ್ದಾರೆ ಎಂದು ನನಗೆ ಗೊತ್ತಿಲ್ಲ. ಆ ಕೇಸ್ ನಡೆದು ಸಾಕ್ಷಿ ವಿಚಾರಣೆ ಆಗಿ ತೀರ್ಮಾನ ಆಗಿದೆ ಎಂದು ನನಗೆ ಗೊತ್ತಿಲ್ಲ. ಆ ದಾವೆ 01.01.2019 ರಂದು ವಜಾ ಆಗಿದೆ ಎಂದು ನನಗೆ ಗೊತ್ತಿಲ್ಲ. ಆ ಪ್ರಕರಣದ ವಾದಿಗಳು ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸಿದೆ ಎಂದರೆ ಗೊತ್ತಿಲ್ಲ. ಹಾಗಾಗಿ ಪ್ರತಿವಾದಿ ರಾಮ, ಲಕ್ಷ್ಮಣ ದಾವಾ ಸ್ವತ್ತುಗಳಲ್ಲಿ ಜಂಟಿ ಸ್ವಾಧೀನ ಹೊಂದಿರುತ್ತಾರೆ ಎಂದರೆ ಸರಿಯಲ್ಲ. ಹಾಗಾಗಿ ನನಗೆ ಮತ್ತು ಇತರೆ ಪ್ರತಿವಾದಿಗಳಿಗೆ ದಾವಾ ಸ್ವತ್ತಿನಲ್ಲಿ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯ ಒಡ ಹುಟ್ಟಿದವರು ತಿಮ್ಮಯ್ಯ ಮತ್ತು ಚಿಕ್ಕತಿಮ್ಮಯ್ಯ ಎಂದರೆ ಸರಿ. ತಿಮ್ಮಯ್ಯ ಮತ್ತು ಚಿಕ್ಕತಿಮ್ಮಯ್ಯ ಈಗ ಬದುಕಿಲ್ಲ ಎಂದರೆ ಸರಿ. ಅವರ ಹೆಂಡತಿಯರ ಹೆಸರಿನಲ್ಲಿ ಖಾತೆ ಆಗಿದೆ ಎಂದರೆ ಸರಿ.

ನಮ್ಮ ತಂದೆ ಮತ್ತು ಅವರ ಸಹೋದರರು ಸೇರಿ 10.01.1994 ರಂದು ಒಂದು ಪಾಲು ಪಟ್ಟಿ ಮಾಡಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆ ಪತ್ರದಲ್ಲಿ ತಿಮ್ಮಯ್ಯ ಇವರ ಹೆಂಡತಿ ಮತ್ತು ಮಗ, ಚಿಕ್ಕತಿಮ್ಮಯ್ಯ ಇವರ ಹೆಂಡತಿ ಸಹಿ ಮಾಡಿದ್ದಾರೆ ಎಂದರೆ ಇರಬಹುದು, ಭಾಗವಾದ ಬಗ್ಗೆ ನನಗೆ ಗೊತ್ತಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಸದರಿ ಭಾಗ ಪತ್ರದ ಪ್ರಕಾರ ನಮ್ಮ ತಂದೆಗೆ ಸ. ನಂ. 1/3 ರಲ್ಲಿ ಸ. ನಂ. 7 1/2 ಗುಂಟೆ, ಸ. ನಂ. 1/7 ರಲ್ಲಿ 1 1/2 ಗುಂಟೆ, ಸ. ನಂ. 9/4 ರಲ್ಲಿ 8 ಗುಂಟೆ, ಸ. ನಂ. 89/3 ರಲ್ಲಿ ಸ. ನಂ. 5 1/2 ಗುಂಟೆ, ಸ. ನಂ. 89/6 ರಲ್ಲಿ 10 ಗುಂಟೆ, ಐಟಂ ನಂ. 1 ರಲ್ಲಿ 16 1/2 ಗುಂಟೆ ನಮ್ಮ ತಂದೆಗೆ ಬಂದಿತ್ತು ಎಂದರೆ ಸರಿ. ಆದರೆ ಐಟಂ 1 ರಲ್ಲಿ 19 1/2 ಗುಂಟೆ ಬಂದಿತ್ತು ಎಂದು ಸಾಕ್ಷಿ ಹೇಳುತ್ತಾರೆ. ದಾವಾ ಐಟಂ ನಂ. 5 ನ್ನು ನಮ್ಮ ತಂದೆ ಸ್ವಯಾರ್ಜಿತವಾಗಿ ಸಂಪಾದಿಸಿದ್ದು ಎಂದರೆ ಸರಿ. ಅದನ್ನು ನಮ್ಮ ತಾಯಿಗೆ ಜೀವನಾಂಶಕ್ಕಾಗಿ ಬಿಟ್ಟಿದ್ದರು ಎಂದರೆ ಸರಿಯಲ್ಲ.



ನಮ್ಮ ಅಕ್ಕಂದಿರು ದಿನಾಂಕಃ 01.07.2021 ರಂದು ರಾಮ, ಲಕ್ಷ್ಮಣ ಇವರ ಪರವಾಗಿ ಹಕ್ಕು ಖುಲಾಸೆ ಪತ್ರ ಬರೆದುಕೊಟ್ಟಿದ್ದಾರೆ ಎಂದರೆ ಸರಿ. ಅದು ನೋಂದಾಯಿತ ಪತ್ರ ಆಗಿರುತ್ತದೆ ಎಂದರೆ ಸರಿ. ಸಾಕ್ಷಿ ಆ ಪತ್ರವನ್ನು ಒಪ್ಪಿಕೊಂಡಿದ್ದರಿಂದ ಅದನ್ನು ನಿ ಡಿ 1 ಎಂದು ಗುರುತಿಸಲಾಯಿತು. ಆ ಪತ್ರದ ಪ್ರಕಾರ ಪ್ರತಿವಾದಿ 2 ರಿಂದ 5 ರವರು ತಲಾ ರೂ. 75,000/- ಹಣ ಪಡೆದಿದ್ದಾರೆ ಎಂದರೆ ಗೊತ್ತಿಲ್ಲ. ನಾನು ಬೆಂಗಳೂರಿನಲ್ಲಿ ಇದ್ದುದರಿಂದ ರೂ. 2,00,000/- ಹಣ ಕೊಟ್ಟಿದ್ದಾರೆ ಎಂದರೆ ಸರಿ. ನಾನು ರೂ. 2,00,000/- ಹಣ ಪಡೆದು ಇನ್ನೂ ರೂ. 3,00,000/- ಬೇಕು ಎಂದು ಕೇಳಿದ್ದರಿಂದ ಸಬ್ ರಿಜಿಸ್ಟರ್ ಕಛೇರಿಗೆ ಹೋಗಿಲ್ಲ ಎಂದರೆ ಸರಿಯಲ್ಲ. ನಾನು ಪಿ. ಯು. ಸಿ. 2 ನೇ ವರ್ಷದ ವರೆಗೆ ಓದಿದ್ದೇನೆ. ನನ್ನ ಮದುವೆ ಕಾಲಕ್ಕೆ ನನ್ನ ತಂದೆ ಸಾಕಷ್ಟು ಹಣ ಖರ್ಚು ಮಾಡಿದ್ದರು ಮತ್ತು ಒಡವೆಗಳನ್ನು ಕೊಟ್ಟಿದ್ದರು

ಎಂದರೆ ಸರಿಯಲ್ಲ.  ನಾನು ಮದುವೆ ಆಗಿ 27 ವರ್ಷದಿಂದ ಬೆಂಗಳೂರಿನಲ್ಲಿ ವಾಸವಾಗಿದ್ದೇನೆ ಎಂದರೆ ಸರಿ. ಆದರೆ ಊರಿಗೆ ಬಂದು ಹೋಗಿ ಮಾಡುತ್ತೇನೆ.

**ಮರುವಿಚಾರಣೆ : ಇಲ್ಲ**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**